



ಎಂ.ಎಸ್.ನರಸಿಂಹಮೂರ್ತಿ



ಪೃಥ್ವಿರಾಜ ಕುಲಕರ್ಣಿ



ಗೌತಮ್ ಮಾಚಯ್ಯ

## ಒತ್ತಡಕ್ಕೆ ಪರಿಹಾರ

'ರಾತ್ರಿ 10ರಿಂದ 11ರ ಅವಧಿಯ ವೀಕ್ಷಕರಲ್ಲಿ ಗಂಡಸರೇ ಹೆಚ್ಚಾಗಿದ್ದರು. ಆದರೆ ಕ್ರೈಮ್ ಬದಲಿಗೆ ಹಾಸ್ಯ ಧಾರಾವಾಹಿ ಶುರು ಮಾಡಿದ ನಂತರ ಕುಟುಂಬದ ಎಲ್ಲ ಸದಸ್ಯರು ಒಟ್ಟಿಗೆ ವೀಕ್ಷಿಸುವಂತಾಗಿದೆ. ದಿನವಿಡೀ ಕೆಲಸ ಹಾಗೂ ತನ್ನದೇ ಆದ ಗೋಳಿನಲ್ಲಿ ಮುಳುಗಿರುವವರು ರಾತ್ರಿ ಹಾಸ್ಯ ಧಾರಾವಾಹಿ ನೋಡಿ ಮನಸ್ಸು ಹಗುರ ಮಾಡಿಕೊಳ್ಳುತ್ತಾರೆ. ದಿನದ ಒತ್ತಡಕ್ಕೆ ತಕ್ಕಮಟ್ಟಿನ ಪರಿಹಾರ ದೊರೆಯುತ್ತದೆ. ಹಾಗಾಗಿ ಹಾಸ್ಯ ಧಾರಾವಾಹಿಗಳಿಗೆ ಒಳ್ಳೆಯ ಪ್ರತಿಕ್ರಿಯೆ ಇದೆ' ಎನ್ನುತ್ತಾರೆ ಝೀ ಕನ್ನಡ ವಾಹಿನಿಯ ಕಾರ್ಯಕಾರಿ ಉಪಾಧ್ಯಕ್ಷ ಗೌತಮ್ ಮಾಚಯ್ಯ.

'ಒಳ್ಳೇ ಕಾಮಿಡಿಯನ್ನು ಜನ ಇಷ್ಟಪಡ್ತಾರೆ. ಕಥೆಯ ಲಾಜಿಕ್ ಬಗ್ಗೆ ವೀಕ್ಷಕರು ಅಷ್ಟಾಗಿ ತಲೆಕೆಡಿಸಿಕೊಳ್ಳುವುದಿಲ್ಲ. ಲಾಜಿಕ್‌ಗಿಂತ ಮ್ಯಾಜಿಕ್ ಮುಖ್ಯ. ತುಸು ಹಿಂದೇಟಿನಿಂದಲೇ ಶುರುವಾದ 'ಪಂಚರಂಗಿ ಪೋಂ ಪೋಂ' ಈಗ ಚೆನ್ನಾಗಿ ಪಿಕಪ್ ಆಗಿದೆ' ಎನ್ನುತ್ತಾರೆ ಸುವರ್ಣ ವಾಹಿನಿ ಮನರಂಜನಾ ವಿಭಾಗದ ಮುಖ್ಯಸ್ಥ ಸುಧೀಂದ್ರ ಭಾರಧ್ವಾಜ್.

ಹಾಸ್ಯ ಧಾರಾವಾಹಿಗಳನ್ನು ನಿರ್ಮಿಸುವುದರಲ್ಲಿ ಸದ್ಯಕ್ಕೆ ಸಿಹಿ ಕಹಿ ಚಂದ್ರು ಅವರ ಫೈನಲ್‌ಕಟ್ ನಂಬರ್ ಒನ್ ಸ್ಥಾನದಲ್ಲಿದೆ. ಝೀ ಕನ್ನಡ ವಾಹಿನಿಯಲ್ಲಿ 2009ರ ಏಪ್ರಿಲ್ 27ರಂದು ಪ್ರಸಾರ ಆರಂಭಿಸಿದ 'ಪಾರ್ವತಿ ಪರಮೇಶ್ವರ' 950 ಸಂಚಿಕೆ ಪೂರೈಸಿದೆ. ಯಶಸ್ಸಿನ ನಾಗಾಲೋಟದಲ್ಲೇ ಇರುವ ಈ ಧಾರಾವಾಹಿ ಸದ್ಯಕ್ಕೆ ನಿಲ್ಲುವ ಯಾವ ಸೂಚನೆಯೂ ಇಲ್ಲ! ಪಾರ್ವತಿ ಪಾತ್ರಧಾರಿ ಶ್ರೀಗೌರಿ ತೀರಿಕೊಂಡರು. ಮತ್ತೊಬ್ಬರು, ಮಗದೊಬ್ಬರು ಬಂದರು. ವೈಶಾಲಿ ಪಾತ್ರಧಾರಿ ನಿರ್ಮಲಾ ಹೆರಿಗೆಗೆ ಹೋದರು. ವೈಶಾಲಿ ತವರುಮನೆಗೆ ಹೋಗಿದ್ದಾಳೆ ಎಂದು ಕಥೆಯನ್ನೇ ಬದಲಾಯಿಸಿತು! ವೈಶಾಲಿಯ ಪತಿ ಲಾಯರ್ ಗುಂಡಣ್ಣ ವಿಚ್ಛೇದನಕ್ಕೆ ಕೋರ್ಟಿಗೆ ಅರ್ಜಿ ಹಾಕಿಕೊಂಡಿದ್ದ ತನ್ನ ಕಕ್ಷಿದಾರಳನ್ನೇ ಮೋಹಿಸುವ ಕಥೆ ಸೃಷ್ಟಿಸಿ ಮತ್ತೊಬ್ಬ ಪ್ರತಿಭಾವಂತ ಕಲಾವಿದೆಗೆ ಆ ಪಾತ್ರ ನೀಡಲಾಯಿತು. ಅದೂ ನಾಲ್ಕಾರು ತಿಂಗಳ ಸರಕೇ ಆಯಿತು. ತವರು ಮನೆಯಿಂದ ವೈಶಾಲಿ ವಾಪಸ್ ಬಂದಿದ್ದಾಳೆ. ಕಥೆ ಮತ್ತೊಂದು ಸ್ವಾರಸ್ಯಕರವಾದ ತಿರುವನ್ನೇ ಪಡೆದಿದೆ. ಮಧ್ಯೆ ಬಂದು ನಟನೆ ಮಾಡಿದ ಕಲಾವಿದೆಗೆ 'ಪಂಚರಂಗಿ...' ಹಾಸ್ಯ ಧಾರಾವಾಹಿಯಲ್ಲಿ ಇದಕ್ಕಿಂತ ಒಳ್ಳೆಯ ಪಾತ್ರವೇ ದೊರೆತಿದೆ.

2009ರ ನವೆಂಬರ್ 2ರಂದು ಝೀ ಕನ್ನಡದಲ್ಲಿ ಪ್ರಸಾರ ಆರಂಭಿಸಿದ 'ಪಾಂಡುರಂಗ ವಿಠಲ' ಪರಿಣತ ಕಲಾವಿದರಿಂದಾಗಿ ಯಶಸ್ಸಿನ ನಾಗಾಲೋಟದಲ್ಲೇ ಮುನ್ನಡೆದಿದೆ. ಈಗಾಗಲೇ 850 ಸಂಚಿಕೆ ಪೂರೈಸಿದೆ. ಈ ಟಿವಿಗೆ ಇದೇ ಫೈನಲ್‌ಕಟ್ ಸಂಸ್ಥೆ ಈ ಹಿಂದೆ ನಿರ್ಮಿಸಿದ್ದ 'ಪಾ.ಪ.ಪಾಂಡು'– 1,124, 'ಸಿಲ್ಲಿ ಲಲ್ಲಿ'–1,185 ಸಂಚಿಕೆ ಪೂರೈಸಿ ಆ ಕಾಲಕ್ಕೆ ದಾಖಲೆ ನಿರ್ಮಿಸಿದ್ದವು. ಈಗಿನ ಎರಡು ಧಾರಾವಾಹಿಗಳು ಆ ದಾಖಲೆಯನ್ನು ಮೀರುವ ಸೂಚನೆಯನ್ನು ಈಗಾಗಲೇ ನೀಡಿವೆ. ತಮ್ಮ ದಾಖಲೆಯನ್ನು ತಾವೇ

ಪಂಚರಂಗಿ ಪೋಂ ಪೋಂ ಧಾರಾವಾಹಿಯ ಚಿತ್ರೀಕರಣ

